ತನ್ನ ಗೈಡ್ ಜೊತೆ ಕೂತು ಡಿಆರ್‌ಎನ್ ಮಾತಿನ ಶೈಲಿ ಆರಂಭಿಸಿದ್ದ. ಪ್ರಣತಿ ತನಗೆ ನಿಗದಿ ಮಾಡಿರುವ ಗೈಡ್‌ನಲ್ಲಿ ಎಷ್ಟು ಸ್ಟಫ್ ಇದೆ ಎಂದು ಹುಡುಕಲು ಆರಂಭಿಸಿದ್ದಳು. ಅವರು ಸರಿಯಾಗಿ ವಿಚಾರ ಮಂಡನೆ ಮಾಡದೆ ಸರ್ಕಸ್ ಮಾಡುತ್ತಿದ್ದಾಗ ಒಳಗೊಳಗೇ ನಗಲು ಆರಂಭಿಸಿದ್ದಳು. ಕಾಲದ ಉಗಿಬಂಡಿ ತನ್ನ ಒಡಲಲ್ಲಿ ಕೆಂಡ ಹರವಿಕೊಂಡು ಸಾಗುತ್ತ ತಮ್ಮಿಬ್ಬರನ್ನೂ ಜೊತೆಗೇ ಕರೆದುಕೊಂಡು ಸಾಗ್ತಿದೆ ಅನಿಸಿತ್ತು ಪ್ರಣತಿಗೆ. ಇಬ್ಬರಿಗೂ ಪಾಠಗಳು ಅದೆಷ್ಟು ಅರ್ಥವಾಗಿದ್ದವೋ... ಪರೀಕ್ಷೆಯನ್ನಂತೂ ಬರೆದು ಪಾಸಾದರು. ಎಷ್ಟು ಅಂಕಗಳು ತೆಗೆದುಕೊಂಡು ಪಾಸು ಅಂತ ತಿಳೀಬೇಕು ಅನಿಸಿ ರಮಾ ಅವರನ್ನ ಕೇಳಿದರೆ ಅವರು ಮೈಮೇಲೆ ಹಾರಿ ಬಂದರು. ಖಾಲಿಕೊಡದ ಪಿತ್ತ ನೆತ್ತಿಗೇರಿತ್ತಾದರೂ ಪ್ರಣತಿ ಎದುರು ಇವೆಲ್ಲ ಬೇಡ ಅನಿಸಿ ಸುಮ್ಮನಾಗಿತ್ತು. ದುಡ್ಡು ಕಟ್ಟಿಸಿಕೊಳ್ಳುವ ದಿನ ನಕ್ಕ ರಮಾ ಇವರೇನಾ ಎಂದು ಪ್ರಣತಿ ಕೂಡ ಪ್ರಶ್ನಿಸಿಕೊಂಡಿದ್ದಳು.

ಬರಬರುತ್ತ ಎಲ್ಲ ಗೋಜಲಾಗಲು ಆರಂಭಿಸಿತು. ಯಾವಾಗ ಅಸೈನ್‌ಮೆಂಟ್ ಬರೆಸಬೇಕು? ಎಷ್ಟು ಬರೆಸಬೇಕು? ಅದಕ್ಕೆ ಎಷ್ಟು ಸಮಯ ಕೊಡಬೇಕು? ಇತ್ಯಾದಿ ಯಾವುದೂ ಸೆಂಟರ್ ಹೆಡ್ ರಮಾಗೆ ತಿಳಿದಿರಲಿಲ್ಲ. ವಿಶ್ವವಿದ್ಯಾಲಯದ ಜೊತೆ ಸಂಪರ್ಕ ಕಲ್ಪಿಸಿಕೊಂಡು ಮಾತಾಡಲೂ ಬಾರದಂತೆ ವರ್ತಿಸಲು ಆರಂಭಿಸಿದ್ದರು. ಒಂದು ಸಂಶೋಧನಾ ಲೇಖನ ನಾಳೆ ಒಳಗೆ ಬೇಕು ಎಂದು ವಾಟ್ಸಪ್ಪಿನ ಗ್ರೂಪಿನಲ್ಲಿ ಮೆಸೇಜ್ ಚೆಲ್ಲಿ ನಡೆದುಬಿಡುತ್ತಿದ್ದರು. ಇಷ್ಟು ಬೇಗ ಹೇಗೆ ಬರೆಯಲು ಸಾಧ್ಯ ಎಂದು ಗ್ರೂಪ್‌ನಲ್ಲಿ ಯಾರಾದರೂ ಕೇಳಿದರೆ 'ಓನ್ಲಿ ಅಡ್ಮಿನ್ಸ್ ಕ್ಯಾನ್ ಮೆಸೇಜ್' ಅಂತ ಮಾಡಿಟ್ಟು ನಾಪತ್ತೆ. ಪ್ರಣತಿ ಏನೊಂದಕ್ಕೂ ರಿಪ್ಲೈ ಮಾಡದೆ ನಗಲು ಆರಂಭಿಸಿದ್ದಳು. ಖಾಲಿಕೊಡ ಪ್ರಣತಿಯ ನಗು ಕಂಡು ಕಸಿವಿಸಿ ಅನುಭವಿಸುತ್ತಿತ್ತು. ಇದನ್ನು ಕಂಡೂ ನಗುತ್ತಿದ್ದ ಪ್ರಣತಿಗೆ ಅನಿಸುತ್ತಿದ್ದದ್ದೇ ಬೇರೆ: ಗಾಡಿ ಹೇಗೋ ಗುಡುಗಿ ಸಾಗ್ತಿದೆ... ಸಾಗ್ಲಿ ಅಂದುಕೊಳ್ಳುವ ಹೊತ್ತಿಗೆ ಗಾಡಿಗೆ ಎದುರಾಗಿ ಬೆಟ್ಟ ಬಂದು ಅಡ್ಡ ನಿಂತಿತ್ತು.

## 8

ಒಂದು ವರ್ಷದ ಅಂಚಿಗೆ ಬಂದಾಗ ಸೆಂಟರ್‌ನಲ್ಲಿ ಹೊಸ ವರಸೆ ಆರಂಭವಾಗಿತ್ತು. ವಿಶ್ವವಿದ್ಯಾಲಯಕ್ಕೆ ವಾರ್ಷಿಕ ವರದಿ ಸಲ್ಲಿಸಬೇಕು. ಅದು ಸಲ್ಲಿಸಬೇಕಿದ್ದರೆ ಸೆಂಟರ್‌ನಿಂದ ಸಹಿ ಆಗಬೇಕು. ಸಹಿ ಆಗಬೇಕಿದ್ದರೆ ಎಪ್ಪತ್ತು ಸಾವಿರ ಕಟ್ಟಿ ಮುಂದೆ ಹೆಜ್ಜೆ ಇಡಬೇಕು. ವಿಶ್ವವಿದ್ಯಾಲಯದ ಬಾಕಿ ಫೀಸುಗಳೆಲ್ಲ ನೀವೇ ಕಟ್ಟಿಕೊಳ್ಳಬೇಕು-ಎಂದಾಗ ಪ್ರಣತಿಯ ಕಿವಿ ಚುರುಕಾಗಿದ್ದವು. ಯಾವುದು ಬಾಕಿ? ದಿಟ್ಟವಾಗಿ ಕೇಳಿದ್ದಳು. ವಾರ್ಷಿಕ ವರದಿ ಫೀಸು.ಇಪ್ಪತ್ತೆಂಟು ಸಾವಿರ.ಸಾರಲೇಖದ ಫೀಸು ಆರೂವರೆ ಸಾವಿರ. ನಮ್ಮ ಸೆಂಟರ್‌ದು ಎಪ್ಪತ್ತು ಸಾವಿರ.

ಎಪ್ಪತ್ತು ಸಾವಿರ ಅಷ್ಟೇ ಅಂದಿದ್ದಿರಲ್ಲ ಅವತ್ತು. ಈಗ ಇದೆಲ್ಲ ನಾವ್ಯಾಕೆ ಕಟ್ಟಬೇಕು? ಮತ್ತೆ ಕೇಳಿದ್ದಳು ಪ್ರಣತಿ. ಪ್ರಣತಿ ಮಾತಿಗೆ ರಮಾ ವ್ಯಂಗ್ಯವಾಗಿ ನಕ್ಕಿದ್ದರು. ಖಾಲಿಕೊಡಕ್ಕೆ ಮತ್ತೆ ಹಿಂಸೆಯಾಗಿತ್ತು.

'ಮೊದಲು ಮೂವತ್ತು ಸಾವಿರಕ್ಕೆ ಬಿಲ್ ಕೊಡಿ. ಆಮೇಲೆ ಎಪ್ಪತ್ತು ಸಾವಿರದ ಮಾತು. ನೀವು ಕೊಡದಿದ್ದರೆ ನಾನು ವಿಸೀಗೆ ಬರೀತೀನಿ.' ಅಂದಳು ಪ್ರಣತಿ. ರಮಾಳ ಕಣ್ಣಳಲ್ಲಿ ಉರೀತಿದ್ದ ನಗುವಿನ ದೀಪಗಳು ಒಮ್ಮೆಗೇ ಆರಿಹೋಗಿದ್ದವು. 'ಅಷ್ಟೊಂದು ಫೀಸು ಒಮ್ಮೆಗೇ ಕಟ್ಟೋಕೆ ಆಗಲ್ಲ.' ಎಂದು ಖಾಲಿಕೊಡ ಹೇಳಿದ್ದಕ್ಕೆ ಉಳಿದ ಮೇಷ್ಟ್ರುಗಳು ಉಡಾಫೆಯಲ್ಲಿ, 'ಕಟ್ಟಬೇಡಿ. ಪಿಎಚ್.ಡಿ ಮಾಡಿ ಅಂದವರು ಯಾರು?' ಅಂದರು. 'ಬೇಡ ಬಿಡು ಆರಾಧ್ಯ. ವಿಸೀಗೆ ಬರೆಯೋಣ' ಅಂದಳು ಪ್ರಣತಿ.

## 9

ಮುಂದೆ ಯಾರೂ ಈ ಇಬ್ಬರನ್ನ ಕೇರೇ ಮಾಡಲಿಲ್ಲ. ಉಳಿದ ಹಸಿದ ಹುಲಿಗಳು ರಮಾರನ್ನು ಬೇರೆಯವರ ಎದುರು ಬೈಯುತ್ತಲೇ ಪೂರಾ ಫೀಸು ಕಟ್ಟಿ ರಸೀತಿ ಪಡೆದುಕೊಂಡರು. ಖಾಲಿಕೊಡದ ಬಳಿ ಹಣ ಇದ್ದಿದ್ದರೆ ತನ್ನ ಸಿದ್ಧಾಂತ ಬದಲಿಸಿ ಹೇಗೊ ಕಟ್ಟಿಬಿಡುತ್ತಿದ್ದ. ಈಗ ಹಣ ಇರದೇ ಹೋದದ್ದಕ್ಕೆ ಪ್ರಣತಿ ಜೊತೆ ಸೈದ್ಧಾಂತಿಕ ಯುದ್ಧಕ್ಕೆ ಕೈಜೋಡಿಸಿದ್ದ. ಸರಿಯಾಗೇ ಇದ್ದ ಖಾಲಿಕೊಡದ ತಲೆ ಕೆಡಿಸಿ ಫೀಸು ಕಟ್ಟದೆ ಸುಮ್ಮನಿದ್ದು ಪ್ರತಿಭಟನೆಗೆ ಇಳಿಯುವ ಹಾಗೆ ಮಾಡಿರುವುದು ಪ್ರಣತಿ ಎಂದು ಹಲವರಿಂದ ಮಾಹಿತಿ ಹೆಕ್ಕಿದ ವರದರಾಜಪ್ಪ ನೇರ ಪ್ರಣತಿಗೇ ಫೋನ್ ಮಾಡಿ ಮಾತು ಆರಂಭಿಸಿದರು, 'ನೋಡಮ್ಮಾ... ಯಾರಿಗೂ ಇಷ್ಟು ಸುಲಭಕ್ಕೆ ಸೀಟು ಸಿಗಲ್ಲ. ಏನೊ ನಿಮ್ಮ ಅದೃಷ್ಟ.